ಅಸಲು ದಾವಾ ಸಂಖ್ಯೆ 104/2019

ಡಿ.ಡಬ್ಲ್ಯು:1

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಕಡೂರು.**

**ದಿನಾಂಕ 09.07.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಶ್ರೀ.ಎನ್.ಎಸ್. ವಾದಿ ಪರ ವಕೀಲರಿಂದ**

ಈ ಹಂತದಲ್ಲಿ ಸಾಕ್ಷಿಗೆ ಮೂರು ಫೋಟೋಗಳನ್ನು ತೋರಿಸಿದ್ದು, ಸದರಿ ಫೋಟೋಗಳಲ್ಲಿ ಕಾಣುವ ದೇವಸ್ಥಾನವನ್ನು ನಾವೆ ನಿರ್ಮಿಸಿರುವುದಾಗಿ ನುಡಿದ ಮೇರೆಗೆ ಸದರಿ ಫೋಟೋಗಳನ್ನು ಕ್ರಮವಾಗಿ **ನಿಪಿ-9 ರಿಂದ 11** ಎಂದು ಗುರುತಿಸಲಾಯಿತು. ನನಗೆ ವಿಸ್ತೀರ್ಣ 0.27 ಗುಂಟೆ ಸ್ವತ್ತನ್ನು ಭೂ ಮಾಪಕರಿಂದ ಅಳತೆ ಮಾಡಿ ನೀಡಿರುವುದಿಲ್ಲ. ಉಳಿಕೆ 0.30 ಗುಂಟೆ ಸ್ವತ್ತನ್ನು ವಾದಿಯು ಶೇಖರ್ ಎಂಬುವವರಿಗೆ ಬೆಳೆ ಬೆಳೆಯಲು ಗುತ್ತಿಗೆ ನೀಡಿದ್ದರು ಎಂದರೆ ಸರಿಯಲ್ಲ. ವಾದಿಯೇ ವ್ಯವಸಾಯ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ.

ನನ್ನ ಅಜ್ಜಿಯ ಜಾಗದಲ್ಲಿದ್ದ ತಾತ್ಕಾಲಿಕ ದೇವಸ್ಥಾನವನ್ನು ನನ್ನ ಅಜ್ಜಿಯು ತೆರವುಗೊಳಿಸಿದ ನಂತರ ನಾನು ದಾವಾ ಆಸ್ತಿಯಲ್ಲಿ ತಾತ್ಕಾಲಿಕ ದೇವಸ್ಥಾನವನ್ನು ನಿರ್ಮಿಸಿದ್ದೇನೆ ಎಂದರೆ ಶಾಶ್ವತವಾಗಿ ದೇವಸ್ಥಾನ ನಿರ್ಮಾಣ ಮಾಡಿದ್ದೇವೆ ಎಂದು ನುಡಿಯುತ್ತಾರೆ. ಶಾಶ್ವತ ದೇವಸ್ಥಾನ ಮಾಡಲು ನೀಲಿ ನಕ್ಷೆ ಪ್ಲಾನ್ ಬೇಕಾಗುತ್ತದೆ ಎಂದರೆ ಸರಿ. ಅವುಗಳನ್ನು ನಾನು ಮಾಡಿಸಿರುವುದಿಲ್ಲ.

ನನ್ನ ಅಜ್ಜಿಯ ಜಾಗದಲ್ಲಿ ತಾತ್ಕಾಲಿಕವಾಗಿ ದೇವಸ್ಥಾನ ನಿರ್ಮಿಸಿದೆವು ಎಂದು ನುಡಿಯುತ್ತಾರೆ. ನನ್ನ ತಂದೆ ಸದರಿ ದೇವಸ್ಥಾನವನ್ನು ನನ್ನ ಅಜ್ಜಿಯ ಜಾಗದಲ್ಲಿ ನಿರ್ಮಿಸಿದಾಗ ನನಗೆ 10 ವರ್ಷ ವಯಸ್ಸಾಗಿತ್ತು. ಈಗ ನನಗೆ 30 ವರ್ಷ ವಯಸ್ಸಾಗಿದೆ. ನನ್ನ ಅಜ್ಜಿಯಿ ಜಾಗದಲ್ಲಿದ್ದ

ದೇವಸ್ಥಾನವನ್ನು ಸುಮಾರು 12 ವರ್ಷಗಳ ಹಿಂದೆ ತೆರವುಗೊಳಿಸಲಾಗಿದೆ. ಯಾವ ಉದ್ದೇಶಕ್ಕೆ ದೇವಸ್ಥಾನವನ್ನು ತೆರವು ಮಾಡಿದ್ದೀರಿ ಎಂದರೆ ಸಾಕ್ಷಿಯ ಶಾಶ್ವತವಾಗಿ ದಾವಾ ಸ್ವತ್ತಿನಲ್ಲಿ ದೇವಸ್ಥಾನ ನಿರ್ಮಿಸಲು ನನ್ನ ಅಜ್ಜಿಯ ಜಾಗದಲ್ಲಿದ್ದ ದೇವಸ್ಥಾನವನ್ನು ತೆರವು ಮಾಡಲಾಯಿತು ಎಂದು ನುಡಿಯುತ್ತಾರೆ. ವಾದಿಯು ದಾವಾ ಸ್ವತ್ತನ್ನು ಕೊಡಲು ಒಪ್ಪಿದ್ದರಿಂದ ಸದರಿ ದೇವಸ್ಥಾನವನ್ನು ತೆರವು ಮಾಡಲಾಯಿತು ಎಂದು ನುಡಿಯುತ್ತಾರೆ. ನನ್ನ ಅಜ್ಜಿಯ ಜಾಗದಲ್ಲಿದ್ದ ದೇವಸ್ಥಾನ ನಮ್ಮ ಸ್ವಂತದ್ದಾಗಿದೆ. ನನ್ನ ಅಜ್ಜಿಯ ಜಾಗದಲ್ಲಿ ಇದ್ದ ದೇವಸ್ಥಾನವನ್ನು ಸ್ವಂತ ಮಾಡಿಕೊಳ್ಳಲು ಯಾವುದೆ ಆಡಿಟ್ ಮಾಡಿರುವುದಿಲ್ಲ ಮತ್ತು ಅರ್ಜಿ ಸಲ್ಲಿಸಿರುವುದಿಲ್ಲ. ಸದರಿ ದೇವಸ್ಥಾನದ ಆದಾಯವನ್ನು ನಾವೆ ಪಡೆಯುತ್ತಿದ್ದೆವು. ನಿಪಿ-9 ರಿಂದ 11 ರಲ್ಲಿರುವ ದೇವಸ್ಥಾನವು ತಾತ್ಕಾಲಿಕ ಶೆಡ್ಡಿನಲ್ಲಿ ನಿರ್ಮಿಸಲಾಗಿದೆ ಎಂದರೆ ಸರಿಯಲ್ಲ. ಶಾಶ್ವತ ಕಟ್ಟಡವು ವಿಶೇಷ ರೂಪುರೇಶೆಯಿಂದ ಕೂಡಿರುತ್ತದೆ ಎಂದರೆ ಹಣವಿರಲಿಲ್ಲ ಎಂದು ನುಡಿಯುತ್ತಾರೆ.

ದಾವಾ ಸ್ವತ್ತಿನಲ್ಲಿ ನನ್ನ ಸ್ವಂತಕ್ಕೆಂದು ತಾತ್ಕಾಲಿಕವಾಗಿ ದೇವಸ್ಥಾನ ನಿರ್ಮಿಸಿ ವ್ಯವಹಾರ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಅರ್ಜಿಯ ಜಾಗದಿಂದ ದೇವಸ್ಥಾನವನ್ನು ಶಾಶ್ವತ ಕಟ್ಟಡವಾಗಿ ಪರಿವರ್ತಿಸಲು ಉದ್ದೇಶಿಸಿದ್ದು, ಆದರೆ ಶಾಶ್ವತವಾಗಿ ದೇವಸ್ಥಾನ ನಿರ್ಮಿಸಲಿಲ್ಲ ಎಂದರೆ ಈಗಿರುವ ಕಟ್ಟಡವೇ ಶಾಶ್ವತ ಕಟ್ಟಡ ಎಂದು ನುಡಿಯುತ್ತಾರೆ.

ನನ್ನ ಅಜ್ಜಿಯು ನಮ್ಮನ್ನು ಖಾಲಿ ಮಾಡಿಸಿದ್ದರು ಎಂದರೆ ಸರಿಯಲ್ಲ. ಆದುದರಿಂದಾಗಿ ಅದೇ ಜಾಗದಲ್ಲಿ ಜನರನ್ನು ಆಕರ್ಶಿಸಲು ಜಾಗ ಬೇಕಾಗಿತ್ತು, ಆದುದರಿಂದಾಗಿ ದಾವಾ ಸ್ವತ್ತನ್ನು

ವಾದಿಯಿಂದ ಬೋಗ್ಯಕ್ಕೆ ಪಡೆಯಲಾಗಿತ್ತು ಎಂದರೆ ಸರಿಯಲ್ಲ. ಸದರಿ ದೇವಸ್ಥಾನದಲ್ಲಿ ಪ್ರಾಣಿ ಬಲಿ ಮಾಡುತ್ತೇವೆ ಎಂದರೆ ಸರಿ. ಆ ರೀತಿ ಪ್ರಾಣಿ ಬಲಿ ಮಾಡಲು ಸರ್ಕಾರದಿಂದ ಅನುಮತಿ ಪಡೆದಿಲ್ಲ.

ದಾವಾ ಸ್ವತ್ತನ್ನು ನೋಂದಾಯಿಸಿ ಕೊಡಲು ನನ್ನ ತಂದೆ ಅಥವಾ ನಾನು ವಾದಿಗೆ ಯಾವುದೆ ನೋಟಿಸು ನೀಡಿಲ್ಲ ಮತ್ತು ದಾವೆಯನ್ನು ಸಲ್ಲಿಸಿಲ್ಲ. ದಾವಾ ಸ್ವತ್ತಿನಲ್ಲಿ ನಾನು ಮತ್ತು ನನ್ನ ಕುಟುಂಬ ವಾಸವಾಗಿಲ್ಲ. ದೇವಸ್ಥಾನದಿಂದ ಸುಮಾರು 100 ಮೀಟರ್ ಅಂತರದಲ್ಲಿ ಇರುವ ನಮಗೆ ಸೇರಿದ ಸ್ವತ್ತಿನಲ್ಲಿ ನಮ್ಮ ಮನೆ ಇದೆ. ದಾವಾ ಸ್ವತ್ತಿನಲ್ಲಿ ನಮ್ಮ ಮನೆ ಇರುವುದಿಲ್ಲ. ಮನೆ ನಿರ್ಮಿಸಲು ಪಂಚಾಯತಿಯಿಂದ ಪರವಾನಗಿ ಪಡೆದಿದ್ದೇವೆ. ಸದರಿ ಮನೆ ಜಾಗವನ್ನು ಸಾವಿತ್ರಮ್ಮ ಎಂಬುವವರಿಂದ ನನ್ನ ತಂದೆ ಖರೀದಿ ಮಾಡಿದ್ದಾರೆ. ಸದರಿ ಮನೆಯ ಜಾಗವನ್ನು ನೋಂದಣಿ ಕ್ರಯ ಪತ್ರದ ಮೂಲಕ ಮಾಡಿಸಿಕೊಂಡಿದ್ದಾರೆ. ಮನೆ ಶಾಶ್ವತ ಕಟ್ಟಡವಾಗಿದೆ. ಅದೇ ರೀತಿ ದೇವಸ್ಥಾನವನ್ನು ಶಾಶ್ವತ ಕಟ್ಟಡವಾಗಿ ನಿರ್ಮಿಸಲು ಪರವಾನಗಿ ಪಡೆಯುವುದು ಅವಶ್ಯಕವಾಗಿದೆ ಎಂದರೆ ಸರಿ. ಸದರಿ ದೇವಸ್ಥಾನದ ಜಾಗವನ್ನು ನೋಂದಣಿ ಮಾಡಿಸಿಕೊಳ್ಳಬೇಕು ಎಂದರೆ ಸರಿ. ನಿಪಿ-9 ರಿಂದ 11 ರಿಲ್ಲಿರುವ ಸ್ವತ್ತು ನೋಂದಣಿ ಮಾಡಿಸಿಕೊಂಡಿಲ್ಲ. ದಾಖಲೆಗಳ ಕೊರತೆಯಿಂದಾಗಿ ನೋಂದಣಿ ಮಾಡಿಸಿಕೊಂಡಿಲ್ಲ ಎಂದು ನುಡಿಯುತ್ತಾರೆ. ದಾಖಲೆಗಳನ್ನು ಸರಿಪಡಿಸಿ ಎಂದು ವಾದಿಗೆ ನೋಟಿಸು ಕೊಟ್ಟಿಲ್ಲ. ಹಿಸ್ಸೆ ಪಿ1, ಪಿ2 ಎಂದು ಇದ್ದು, ಹಾಗಾಗಿ ದಾಖಲೆ ಸರಿಪಡಿಸಬೇಕಿತ್ತು ಎಂದು ನುಡಿಯುತ್ತಾರೆ. ಆ ರೀತಿ ಸರಿಪಡಿಸಲು ನೋಟಿಸು ನೀಡಿದ್ದೀರಾ ಎಂದರೆ ವಾದಿಯು ಸರಿಪಡಿಸಲು ಓಡಾಡುತ್ತಿದ್ದು, ಆ ನಂತರ ಈ ದಾವೆ ಸಲ್ಲಿಸಿದ್ದಾರೆ ಎಂದು ನುಡಿಯುತ್ತಾರೆ. ಈ ದಾವೆ ಸಲ್ಲಿಸಿದ ನಂತರ ವಾದಿಗೆ ಕರಾರಿನ ನೆರವೇರಿಕೆ ಕೋರಿ ನೋಟಿಸು ಸಲ್ಲಿಸಿಲ್ಲ ಮತ್ತು ದಾವೆ ಸಲ್ಲಿಸಿಲ್ಲ.

ದೇವಸ್ಥಾನ ನಿರ್ಮಿಸಲು ಗ್ರಾಮ ಪಂಚಾಯತಿಯಿಂದ ಪರವಾನಗಿ ಪಡೆದಿಲ್ಲ. ವಾದಿಯು ನನ್ನ ಹಾಗೂ ನನ್ನ ತಂದೆಯ ವಿರುದ್ಧ ದಾವಾ ಸ್ವತ್ತಿನ ಸಂಬಂಧ ಸಖರಾಯಪಟ್ಟಣ ಪೋಲಿಸ್ ಠಾಣೆಯಲ್ಲಿ 3-4 ಬಾರಿ ದೂರು ಸಲ್ಲಿಸಿದ್ದರು ಎಂದರೆ ಸರಿ. ಜಾಗ ಖಾಲಿ ಮಾಡಿ ಎಂದು ಆ ದೂರು ಸಲ್ಲಿಸಿದ್ದರು ಎಂದು ನುಡಿಯುತ್ತಾರೆ. ಸದರಿ ಜಾಗದಲ್ಲಿ ನಾನು ದೇವಸ್ಥಾನ ಕಟ್ಟಡ ಅಭಿವೃದ್ದಿ ಮಾಡಲು ಹೋದಾಗ ದೂರು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ದಾವೆ ಅಧಿ ವಿಚಾರಣೆಯಲ್ಲಿದ್ದಾಗ ನಾವು ದೇವಸ್ಥಾನ ಅಭಿವೃದ್ಧಿ ಪಡಿಸದಂತೆ ವಾದಿಯು ಪೋಲಿಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದು, ಆ ಸಂಬಂಧ ನಾವು ವಿಚಾರಣೆಗೆ ಹಾಜರಾಗಿದ್ದೆವು ಎಂದರೆ ಸರಿಯಲ್ಲ.

ದೇವಸ್ಥಾನ ವಹಿವಾಟನ್ನು ನಾನೆ ನೋಡಿಕೊಳ್ಳುತ್ತೇನೆ. ನಾನು ಊರಿನ ಗ್ರಾಮದವರ ಮುಂದೆ ಕ್ರಯ ಪತ್ರ ನೋಂದಾಯಿಸಿ ಕೊಡುವಂತೆ ವಾದಿಯನ್ನು ಕೇಳಿದ್ದೆ. ನಾನು ವಾದಿಯಿಂದ 5 ಲಕ್ಷ ಹಣಕ್ಕೆ ದಾವಾ ಸ್ವತ್ತನ್ನು ತಾತ್ಕಾಲಿಕ ದೇವಸ್ಥಾನ ನಿರ್ಮಿಸಲು ಬೋಗ್ಯಕ್ಕೆ ಪಡೆದಿದ್ದೆ ಎಂದರೆ ಸರಿಯಲ್ಲ. ಆದುದರಿಂದ ನನ್ನ ತಂದೆಯ ಖಾತೆಯಿಂದ ವಾದಿಯ ಖಾತೆಗೆ 5 ಲಕ್ಷ ಹಣ ಜಮಾ ಆಗಿದ್ದು, ಉಳಿಕೆ ಯಾವುದೆ ಹಣ ಜಮಾ ಆಗಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯು ಈ ದಾವೆ ಸಲ್ಲಿಸಿದ ನಂತರ ನಿಡಿ-5 ರಿಂದ 7 ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಡಿ-8 ಪಾಸ್ ಪುಸ್ತಕದಲ್ಲಿ ನನ್ನ ತಂದೆ ಖಾತೆಯಿಂದ ವಾದಿಯ ಖಾತೆಗೆ 5 ಲಕ್ಷ ಜಮೆ ಆಗಿರುವುದು ಮಾತ್ರ ನಮೂದಾಗಿದೆ ಎಂದರೆ ಸರಿ. ಭಕ್ತಾಧಿಗಳಿಂದ ಹಣ ಬಂದಿದೆ ಎಂದು ತಿಳಿಸಿದ್ದು, ಅದನ್ನು ಬ್ಯಾಂಕಿಗೆ ಜಮೆ ಮಾಡಿರುವುದಿಲ್ಲ. ನಮ್ಮ ದೇವಸ್ಥಾನಕ್ಕೆ ಭಕ್ತಾಧಿಗಳು ವಾರ್ಷಿಕ 2-3 ಲಕ್ಷ ಹಣವನ್ನು ನೀಡುತ್ತಾರೆ ಎಂದು ನುಡಿಯುತ್ತಾರೆ. ಸದರಿ 2-3 ಲಕ್ಷವನ್ನು ದೇವಸ್ಥಾನದ ಅಭಿವೃದ್ದಿಗೆ ವ್ಯಯ

ಮಾಡುತ್ತೇವೆ. ಆ ಸಂಬಂಧ ಲೆಕ್ಕ ಪುಸ್ತಕದಲ್ಲಿ ನಮೂದಿಸಿದ್ದೇವೆ. ಆಯ ವ್ಯಯದ ಬಗ್ಗೆ ಆಡಿಟ್ ಮಾಡಿಸಿದ್ದೇನೆ. ಸರ್ಕಾರಕ್ಕೆ ಆಡಿಟ್ ಪ್ರಕಾರ ಆದಾಯ ತೆರಿಗೆ ಪಾವತಿಸಿರುವುದಿಲ್ಲ. ಸರ್ಕಾರದಿಂದ ಜಿಎಸ್‌ಟಿ ನಂಬರ್ ಪಡೆದಿರುವುದಿಲ್ಲ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಖರೀದಿಸಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸಯರಿಲ್ಲ.

ಬೋಗ್ಯದ ಬಾಬ್ತು ನನ್ನ ತಂದೆಯು ರೂ.5 ಲಕ್ಷ ಹಣವನ್ನು ವಾದಿಗೆ ನೀಡಿದ್ದಾರೆ ಎಂದರೆ ಸರಿಯಲ್ಲ. ಬೋಗ್ಯದ ಕರಾರು ಮುಗಿದ ನಂತರ ದಾವಾ ಸ್ವತ್ತನ್ನು ಬಿಡಲು ನಮಗೆ ವಾದಿಯು ತಿಳಿಸಿದ್ದರು, ಆ ನಂತರ ನಾವು ಹೆಚ್ಚಿನ ಹಣಕ್ಕೆ ಬೋಗ್ಯ ಮುಂದುವರೆಸಲು ಕೋರಿದೆವು ಎಂದರೆ ಸರಿಯಲ್ಲ. ನಂತರ ಆ ರೀತಿ ಮುಂದುವರೆಸಲು ಆಗುವುದಿಲ್ಲವೆಂದು ನಿಪಿ-4 ರಂತೆ ದಾವಾ ಸ್ವತ್ತನ್ನು ಖಾಲಿ ಮಾಡಿಸಲು ನಮಗೆ ನೋಟಿಸು ನೀಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ವಾದಿಗೆ ಅವಶ್ಯಕತೆ ಇದ್ದು, ಸದರಿ ಸ್ವತ್ತಿನಲ್ಲಿ ನಾವು ಮುಂದುವರೆಯಲು ಯಾವುದೇ ಹಕ್ಕು, ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಾವು ಬೋಗ್ಯದಾರರಾಗಿದ್ದು ದಾವಾ ಸ್ವತ್ತನ್ನು ವಾದಿಗೆ ಬಿಟ್ಟು ಕೊಡಬೇಕಾಗದ ಹೊಣೆ ಹೊಂದಿದ್ದೇವೆ ಎಂದರೆ ಸರಿಯಲ್ಲ. ನಾವು ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆದಿದ್ದರೆ, ಸದರಿ ಸ್ವತ್ತನ್ನು ನೋಂದಣಿ ಮಾಡಿಸಿಕೊಳ್ಳಬೇಕಿತ್ತು ಎಂದರೆ ಸರಿಯಲ್ಲ. ಹಾಗಾಗಿ ನೋಟಿಸು ನೀಡಿದರು ಎಂದರೆ ಕ್ರಯಕ್ಕೆ ಪಡೆದಿರುವುದಾಗಿ ಸುಳ್ಳು ಸಂಗತಿಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಮೌಖಿಕ ಮಾತಿನ ಮೂಲಕ ದಾವಾ ಸ್ವತ್ತನ್ನು ವಾದಿಯು ಮೂರು ವರ್ಷಕ್ಕೆ ನಮಗೆ ಬೋಗ್ಯಕ್ಕೆ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಅವಧಿ ಮುಗಿದ ನಂತರ ನಾನು ದಾವಾ ಸ್ವತ್ತನ್ನು ವಾದಿಯ ಪರ ನೀಡದಿದ್ದಾಗ ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

ಅಸಲು ದಾವಾ ಸಂಖ್ಯೆ 104/2019

ಡಿ.ಡಬ್ಲ್ಯು:1

**ಮರುವಿಚಾರಣೆ ಇಲ್ಲ**.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ. ನ್ಯಾಯಾಲಯದ ಕಡೂರು